2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 111/2017</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗಿರೀಶ್ ಹೆಚ್.ಎನ್. | ಪಿಡಬ್ಲೂ- 2 |
| ತಂದೆಯ ಹೆಸರು | - | ಮಲ್ಲೇಶಪ್ಪ | ಸಿಡಬ್ಲೂ -2 |
| ವಯಸ್ಸು | - | 59 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಕೆ.ಹೊಸಳ್ಳಿ, ಕಡೂರು | |

ದಿನಾಂಕಃ 27.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಆರೋಪಿತರು ಗೊತ್ತು. ಅವರು ನಮ್ಮ ದಯಾದಿಗಳು. ಚಾಸಾ.1 ಮಾಲ ನನ್ನ ಮಗಳು. ಚಾಸಾ.3 ರಿಂದ 5 ರವರು ನಮ್ಮ ಊರಿನ ನಿವಾಸಿಗಳು. ನನಗೆ ಇಬ್ಬರು ಮಕ್ಕಳು, ಒಂದು ಹೆಣ್ಣು ಹಾಗೂ ಒಂದು ಗಂಡು ಮಕ್ಕಳು.

2. ನನಗೆ ಬೀರೂರು ಹೋಬಳಿ ಚಿಕ್ಕಿಂಗಳ ಗ್ರಾಮದ ಜಟ್ಟಿ ಕಾವಲಿನ ಸರ್ವೆ ನಂ.12 ರಲ್ಲಿ ಅಡಿಕೆ ಹಾಗೂ ತೆಂಗಿನ ತೋಟ ಇರುತ್ತದೆ. ನಮ್ಮ ಪಕ್ಕದ ತೋಟ ಆರೋಪಿತರಿಗೆ ಸೇರಿದ್ದು ಅದರಲ್ಲಿ ಅಡಿಗೆ ಹಾಗೂ ತೆಂಗು ಬೆಳೆದಿರುತ್ತಾರೆ. ನಮ್ಮ ಹಾಗೂ ಆರೋಪಿತರ ಮದ್ಯೆ ಜಮೀನಿನ ಬದುವಿಗೆ ಸಂಬಂಧಿಸಿದಂತೆ ತಕರಾರು ಇದೆ.

3. ದಿಃ 05.09.2016 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ತೋಟಕ್ಕೆ ಚೌತಿ ಪೂಜೆಗೆಂದು ಹೋಗಿದ್ದೆ. ಅಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ನಾನು ತೋಟದಲ್ಲಿ ಪೂಜೆ ಮಾಡುತ್ತಿದ್ದಾಗ ಆರೋಪಿತರು ಬಂದು ಜಗಳ ಪ್ರಾರಂಭಿಸಿದರು. ಎಲ್ಲಾ ಆರೋಪಿತರು ನನಗೆ ಸೂಳೆ ಮಗನೆ, ಬೋಳಿ ಮಗನೆ ಎಂದು

ಬೈದರು. 1 ನೇ ಆರೋಪಿ ಕುಮಾರ ನನಗೆ ಕೊಡಲಿಯಿಂದ ಎಡಗಾಲಿಗೆ ಹೊಡೆದರು. 2 ನೇ ಆರೋಪಿ ಪಾರ್ವತಮ್ಮ ನನ್ನ ಮರ್ಮಾಂಗಕ್ಕೆ ಕುಡುಗೋಲಿನಿಂದ ತಿವಿದಳು. 3 ನೇ ಆರೋಪಿ ಪವನ ನನ್ನ ಎದೆ ಹಾಗೂ ಸೊಂಟದ ಭಾಗಕ್ಕೆ ಕುಡುಗೋಲಿನಿಂದ ಹೊಡೆದರು. 4 ನೇ ಆರೋಪಿ ಪ್ರಸನ್ನ ನನಗೆ ರಾಡಿನಿಂದ ಹಲ್ಲೆ ಮಾಡಿದನು. 1 ನೇ ಆರೋಪಿ ಕೊಡಲಿಯಿಂದ ಹೊಡೆಯುವಾಗ ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದರಿಂದ ಏಳು ನನ್ನ ಕಾಲಿಗೆ ಬಿತ್ತು.

4. ನನಗೆ ರಕ್ತಸ್ರಾವವಾಯಿತು. ಅಕ್ಕಪಕ್ಕದ ನಿವಾಸಿಗಳಾದ ಚಾಸಾ.3 ರಿಂದ 5 ರವರು ಬಂದು ಗಲಾಟೆ ಬಿಡಿಸಿದರು. ಚಾಸಾ.4 ಮತ್ತು 5 ರವರು ನನ್ನನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ವೈದ್ಯರು ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲಿನ ಕೆ.ಎಂ.ಸಿ. ಆಸ್ಪತ್ರೆಗೆ ಕಳುಹಿಸಿದರು. ಕೆ.ಎಂ.ಸಿ. ಆಸ್ಪತ್ರೆಯಲ್ಲಿ ನಾನು ಸುಮಾರು 15 ದಿನಗಳ ಕಾಲ ಚಿಕಿತ್ಸೆ ಪಡೆದಿದ್ದೇನೆ ಹಾಗೂ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದೇನೆ.

5. ದಿಃ 16.11.2016 ರಂದು ಕಡೂರು ಪೋಲೀಸರು ನಮ್ಮ ಮನೆಗೆ ಬಂದು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದಿದ್ದಾರೆ. ಚಾಸಾ.1 ರವರು ಈ ಬಗ್ಗೆ ದೂರು ಸಲ್ಲಿಸಿದ್ದಾರೆ.

6. ಘಟನೆ ನಡೆದ ಸ್ಥಳದ ಛಾಯಚಿತ್ರಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ.14 ಮತ್ತು 15 ಎಂದು ಗುರುತಿಸಲಾಯಿತು.

ನಾವು ಆರೋಪಿತರ ಬಾಬ್ತು ತೋಟದ ಒತ್ತುವರಿ ಮಾಡಿದ್ದೇವೆಂದು, ಆರೋಪಿತರು ನನ್ನ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ.

7. ನನಗಾದ ಗಾಯಗಳ ಬಾಬ್ತು ಛಾಯಚಿತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಈಗಾಗಲೆ ನಿಪಿ.2 ರಿಂದ 4 ಎಂದು, ಸಿಡಿಯನ್ನು ನಿಪಿ.5 ಎಂದು ಗುರುತಿಸಲಾಗಿದೆ. ನನಗೀಗ ವ್ಯವಸಾಯದ ಕೆಲಸ ಮಾಡಲು ಆಗುವುದಿಲ್ಲ.

(ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಮಂಜುನಾಥ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ